


## ಹೋರಾಟದ ನೆಲದಲ್ಲಿ ವಿವಾದದ ಕಾವು

ಐತಿಹಾಸಿಕ ಹೋರಾಟ ನಡೆದ ವಿದುರಾಶ್ವತ್ಥದಲ್ಲಿ ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಅಂದರೆ 2022ರ ಜೂನ್‌ನಲ್ಲಿ ‘ರಾಜಕೀಯ ವಿವಾದ’ದ ಕಾವು ಸಹ ಹೆಚ್ಚಿತ್ತು.

ಚಿತ್ರಪಟ ಗ್ಯಾಲರಿಯಲ್ಲಿನ ಕೆಲವು ಚಿತ್ರಗಳು ಬದಲಾಗಬೇಕು ಎಂದು ಆರ್‌ಎಸ್‌ಎಸ್, ಬಿಜೆಪಿ, ಬಜರಂಗದಳದ ಕಾರ್ಯಕರ್ತರು ಆಗ್ರಹಿಸಿದ್ದರು. ಗ್ಯಾಲರಿಯಲ್ಲಿರುವ ವೀಕ್ಷಕರ ಸಹಿ ಪುಸ್ತಕದಲ್ಲಿಯೂ ಚಿತ್ರಗಳು ಬದಲಾಗಬೇಕು ಎಂದು ಪ್ರಸ್ತಾಪಿಸಿದ್ದರು.

‘ಬಲಪಂಥೀಯ ರಾಜಕಾರಣ; ಹಿಂದೂ ಕೋಮುವಾದ; ಹಿಂದೂ ಮಹಾಸಭಾ; ಆರ್‌ಎಸ್‌ಎಸ್’ ಎನ್ನುವ ಚಿತ್ರವಿದೆ. ಗಾಂಧಿ ಹತ್ಯೆ ಮತ್ತು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿನ ಚಿತ್ರಗಳನ್ನು ಗ್ಯಾಲರಿಯಲ್ಲಿ ಕಾಣಬಹುದು. ಗಾಂಧಿ ಹತ್ಯೆಗೆ ಸಂಬಂಧಿಸಿದಂತೆ ಚಿತ್ರಗಳಲ್ಲಿ ಸಾವರ್ಕರ್ ಅವರ ಚಿತ್ರವೂ ಇದೆ.

ಹಿಂದೂ ಕೋಮುವಾದಕ್ಕೆ ಸಂಬಂಧಿಸಿದಂತೆ ಇರುವ ಚಿತ್ರದಿಂದ ಆರ್‌ಎಸ್‌ಎಸ್ ಹೆಸರು ತೆಗೆಯಬೇಕು ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಸಾವರ್ಕರ್ ಹೋರಾಟದ ಚಿತ್ರಗಳನ್ನು ಗ್ಯಾಲರಿಯಲ್ಲಿ ಅಳವಡಿಸಬೇಕು ಎಂದು ಆರ್‌ಎಸ್‌ಎಸ್ ಕಾರ್ಯಕರ್ತರು ಆಗ್ರಹಿಸಿದ್ದರು.

ಆಗ ವಿದುರಾಶ್ವತ್ಥದ ಸ್ವಾತಂತ್ರ್ಯ ಸ್ಮಾರಕ ಸಮಿತಿ ಸದಸ್ಯರು ‘ವಿದುರಾಶ್ವತ್ಥಕ್ಕೆ ರಕ್ಷಣೆ ಕೊಡಿ’ ಎಂದು ಪೊಲೀಸರಿಗೆ ಮನವಿ ನೀಡಿದ್ದರು. ಆರ್‌ಎಸ್‌ಎಸ್, ಬಜರಂಗದಳಕ್ಕೆ ಪ್ರತಿರೋಧ ತೋರಿ ಸ್ವಾತಂತ್ರ್ಯ ಸೇನಾನಿ ಎಚ್.ಎಸ್. ದೊರೆಸ್ವಾಮಿ ವೇದಿಕೆ ಸದಸ್ಯರು, ದಲಿತ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು ವಿದುರಾಶ್ವತ್ಥಕ್ಕೆ ಜಾಥಾ ಸಂಘಟಿಸಿದ್ದವು. ಈ ಜಾಥಾ ಕಾರಣದಿಂದ ವಿದುರಾಶ್ವತ್ಥದ ವಾತಾವರಣ ಕಾವೇರಿತ್ತು.

ಭಾಗಿಯಾದವರು ಯಾರೂ ಈಗ ಬದುಕಿಲ್ಲ. ಇಬ್ಬರು ಹೋರಾಟಗಾರರು ನೀಡಿದ ಮಾಹಿತಿ ಆಧರಿಸಿ ಅಂದು ನಡೆದ ಹತ್ಯಾಕಾಂಡದ ಚಿತ್ರ ರೂಪಿಸಲಾಗಿದೆ. 175 ವರ್ಷಗಳ ಸ್ವಾತಂತ್ರ್ಯ ಹೋರಾಟ ಪ್ರತಿಬಿಂಬಿಸುವ ರೀತಿಯಲ್ಲಿ ಚಿತ್ರಪಟ ಗ್ಯಾಲರಿ ರೂಪಿಸಲಾಗಿದೆ. ವ್ಯಕ್ತಿ ಕೇಂದ್ರಿತವಾಗಿ ಗ್ಯಾಲರಿ ಇಲ್ಲ. ಹೋರಾಟಗಳನ್ನು ಕೇಂದ್ರವಾಗಿಸಿಕೊಂಡು ರೂಪಿಸಲಾಗಿದೆ’ ಎಂದಿದ್ದರು.

ಅಂದು ಜಾತ್ರೆ ನಡೆಯುತ್ತಿತ್ತಂತೆ. ದೇಗುಲದ ಹಿಂಭಾಗದ ಬಯಲಿನಲ್ಲಿ ಸೇರಿದ್ದ ಜನರಿಗಿಂತಲೂ ಹೊರಭಾಗದಲ್ಲಿ ದೊಡ್ಡ ಸಂಖ್ಯೆಯ ಜನರು ಇದ್ದರಂತೆ. ಪೊಲೀಸರು ಏಕಾಏಕಿ ಗುಂಡಿನ ದಾಳಿ ಮಾಡಿದರಂತೆ. ಮರಗಳ ಮೇಲೆ ಹತ್ತಿದ್ದ ಜನರು ಬಿದ್ದರಂತೆ. ಈ ಮಾಹಿತಿ ಆಧರಿಸಿ ಚಿತ್ರ ರೂಪಿಸಲಾಗಿದೆ.

ಹೋರಾಟಗಾರ ಜ್ವಾಲನಯ್ಯ ಅವರು ಹೇಳುವ ಪ್ರಕಾರ, ಅವರನ್ನು ಒಳಕ್ಕೆ ಬಿಡಲಿಲ್ಲವಂತೆ. ಅವರ ಜೊತೆಯಲ್ಲಿಯೇ ಸಾವಿರಾರು ಮಂದಿ ಇದ್ದರಂತೆ ಎಂದು ತಿಳಿಸಿದರು.



ಚಿತ್ರಪಟ ಗ್ಯಾಲರಿಯಲ್ಲಿರುವ ವಿದುರಾಶ್ವತ್ಥ ಹೋರಾಟ ಬಿಂಬಿಸುವ ಚಿತ್ರ